# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 185
2. ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ
3. ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 10-12-2018

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಸಾರ್ವಜನಿಕರು ಮನೆ ಮುಂಭಾಗದಲ್ಲಿ ಅಥವಾ ಹಿಂಭಾಗದಲ್ಲಿ ಹಾಗೂ ಟೆರೇಸ್ ಗಳಲ್ಲಿ ಹಣ್ಣು ತರಕಾರಿ ಬೆಳೆಯಲು ತೋಟಗಾರಿಕೆ ಇಲಾಖೆಯಿಂದ ಪ್ರೋತ್ಸಾಹಿಸಲು ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳಾವುವು; | ಸಾರ್ವಜನಿಕರು ಮನೆ ಮುಂಭಾಗದಲ್ಲಿ ಅಥವಾ ಹಿಂಭಾಗದಲ್ಲಿ ಹಾಗೂ ಟೆರೇಸ್ ಗಳಲ್ಲಿ ಹಣ್ಣು ತರಕಾರಿ ಬೆಳೆಯಲು ತೋಟಗಾರಿಕೆ ಇಲಾಖೆಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಎಂಬ ಕಾರ್ಯಕ್ರಮದಡಿ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಕೈತೋಟ ಮತ್ತು ತಾರಸಿ ತೋಟಗಳನ್ನು ಬೆಳೆಸುವ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ.<br>2. ಫಲಾನುಭವಿಗಳಿಗೆ ತರಕಾರಿ ಬೀಜಗಳು, ಪ್ರೋಟ್ರೇನಲ್ಲಿ ಬೆಳೆದ ತರಕಾರಿ ಸಸಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.<br>3. ಕೈತೋಟ ಮತ್ತು ತಾರಸಿ ತೋಟ ಮಾಡುವವರಿಗೆ ಕುಂಡ, ಗ್ರೋ ಬ್ಯಾಗ್, ಸ್ಪ್ರೇಯರ್, ಸಿಕೇಚರ್ ಹಾಗು ಇತರ ಸಲಕರಣೆಗಳನ್ನು ಶೇ. 50 ರ ಸಹಾಯಧನದಲ್ಲಿ ನೀಡಲಾಗುತ್ತಿದೆ.<br>4. ಸಸ್ಯ ಪೋಷಕಾಂಷಗಳಾದ ವೆಜಿಟೇಬಲ್ ಸ್ಪೆಷಲ್ ಹಾಗೂ ಬಯೋಮಿಕ್ಸ್ ಗಳನ್ನು ಉಚಿತವಾಗಿ ನೀಡಲಾಗುತ್ತಿದೆ. |
| ಆ. | ಈ ಹಿಂದೆ ಉಚಿತವಾಗಿ ಬೀಜ ವಿತರಣೆ ಕಾರ್ಯವನ್ನು ಕೈಗೊಳ್ಳಲಾಗಿದ್ದ ರೀತ್ಯಾ ಪ್ರಸಕ್ತ ಸಾಲಿನಲ್ಲೂ ಕೈಗೊಳ್ಳಲು ಕ್ರಮಕೈಗೊಳ್ಳಲಾಗಿದೆಯೇ; | ಹೌದು ಮೇಲಿನಂತೆ ಕ್ರಮಕೈಗೊಳ್ಳಲಾಗಿದೆ. |
| ಇ. | ಸಾರ್ವಜನಿಕರು ಕೇಳಿದಲ್ಲಿ ಬೀಜ ಮತ್ತು ಗೊಬ್ಬರವನ್ನು ಹಾಗೂ ಸಲಹೆ-ಸೂಚನೆಗಳನ್ನು ಉಚಿತವಾಗಿ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ? | ಹಮ್ಮಿಕೊಳ್ಳಲಾಗಿದೆ. |

ಸಂಖ್ಯೆ: ತೋಇ 358 ತೋಇವಿ 2018

(ಎಂ.ಸಿ.ಮನಗೂಳಿ)

**ತೋಟಗಾರಿಕೆ ಸಚಿವರು**

ಎಂ.ಸಿ. ಮನಗೂಳಿ (ಸಿಂದಗಿ)
ತೋಟಗಾರಿಕೆ ಸಚಿವರು